**ಇಂದು ದಿನಾಂಕ 09.06.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟಿ ಸವಾಲುಃ ಶ್ರಿಲ ಡಿ ಎಲ್ ಕೆ ಪ್ರತಿವಾದಿ ನಂ. 1 ಮತ್ತು 3 ರಿಂದ 5 ರ ಪರ ವಕೀಲರಿಂದಃ**

1. ನಾನು ಬಿ.ಇ ಪದವಿದರಳಿದ್ದು ಸಂಸ್ಕೃತದಲ್ಲಿ ಸ್ನಾತಕ್ಕೋತ್ತರ ಪದವಿಯನ್ನು ಮಾಡುತ್ತಿದ್ದೇನೆ. ಮೂಲವಾದಿ ನನ್ನ ತಾಯಿ. ದಾವಾ ಸ್ವತ್ತುಗಳು ಎಷ್ಟು ಇವೆ ಎಂದು ನಾನು ದಾವಾ ಪತ್ರವನ್ನು ನೋಡಿ ಹೇಳಬಲ್ಲೆ. ದಾವಾ ಆಸ್ತಿಗಳು ಒಂದನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಗಳು ಮತ್ತು ಕೆಲವು ಆಸ್ತಿಗಳು 3 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸುಳ್ಳು, ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎನ್ನುತ್ತಾರೆ. ದಾವಾ ಅನುಸೂಚಿ E ಮತ್ತು J ಆಸ್ತಿಗಳು ನನ್ನ ತಾತನಾದ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತವೆ.

2. ತಿದ್ದುಪಡಿ ವಾದ ಪತ್ರದಲ್ಲಿ ಸೇರಿಸುವಂತ ನಾನು ಸದರಿ ತಿದ್ದುಪಡಿ ವಾದ ಪತ್ರವನ್ನು ನೋಡಿ ಹೇಳಬಹುದು, ಬಾಯಿ ಮಾತಿದಿಂದ ಹೇಳಲು ಬರುವುದಿಲ್ಲ. ದಾವಾ ಅನುಸೂಚಿ J ಆಸ್ತಿಗಳು ನನ್ನ ತಾತನಾದ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತವೆ. ಸದರಿ ಆಸ್ತಿ ವತ್ಸಲಾ ಇವರು ಅಂದರೆ 3 ನೇ ಪ್ರತಿವಾದಿ ಖರೀದಿ ಮಾಡಿರುವ ಆಸ್ತಿ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳಲ್ಲಿ 1/6 ಅಂಶ ಪಾಲನ್ನು ಕೊಡಲು ಪ್ರತಿವಾದಿ ನಂ. 1,3 ರಿಂದ 5 ಇವರು ಒಪ್ಪುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು 1/5 ಅಂಶ ಕೊಡುತ್ತಿರಾ ಎಂದರೆ ಒಪ್ಪುತ್ತೇನೆ. ನನ್ನ ಪ್ರಕಾರ ಪ್ರತಿವಾದಿ ನಂ. 3 ಇವರಿಗೆ ಪಾಲು ಬರುವುದಿಲ್ಲ ಎಂಬ ಪ್ರಶ್ನೆಗೆ ತನ್ನ ಗಂಡನ ಪಾಲನ್ನು ಅವಳು ತೆಗೆದುಕೊಳ್ಳಲು ನಮಗೆ ಅಭ್ಯಯಂತರವಿಲ್ಲ ಎಂದು ಉತ್ತರಿಸುತ್ತಾರೆ. 3 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಪತ್ನಿ ಇರುವ ಕಾರಣವೇ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ. ನನ್ನ ವಾದ ಪತ್ರದಲ್ಲಿ ಸದರಿ ಪ್ರತಿವಾದಿ ನಂ. 3 ಇವರಿಗೆ ಪಾಲು ಬರುವುದಿಲ್ಲವೊ ಎಂದು ನನಗೆ ಗೊತ್ತಿಲ್ಲ. ನಾನು ಸಾಕ್ಷ್ಯವನ್ನು ನನ್ನ ಅಮ್ಮನಿಂದ ತಿಳಿದುಕೊಂಡ ಪರಿಜ್ಞಾನದ ಮೂಲಕ ನುಡಿಯುತ್ತಿದ್ದೇನೆ. ಮೂಲವಾದಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ತೊಂದರೆ ಇರುವುದಿಲ್ಲ, ಉದ್ದೇಶ ಪೂರ್ವಕವಾಗಿ ಸದರಿಯವರು ಗೈರು ಹಾಜರು ಇದ್ದು ಸತ್ಯಾಂಶ ಹೊರಬಿಳುತ್ತದೆ ಎನ್ನುವ ಉದ್ದೇಶದಿಂದಲೇ ನನ್ನ ಮೂಲಕ ನುಡಿ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಕಾಲಿನ ಊತದಿಂದ ನಡೆಯಲು ಆಗುವುದಿಲ್ಲ ಎಂಬುವುದಕ್ಕೆ ಯಾವುದೇ ರೀತಿಯ ವೈದ್ಯಕೀಯ

ದಾಖಲೆಗಳನ್ನು ಹಾಜರು ಪಡಿಸಿಲ್ಲ. ಪ್ರತಿವಾದಿ ನಂ. 1 ಮತ್ತು 3 ಇವರ ಪ್ರತಿವಾದ ಪತ್ರದ ವಿಷಯ ಸಂಗತಿಗಳನ್ನು ನಾನು ತಿಳಿದುಕೊಂಡಿಲ್ಲ.

4. ಕೆಲವು ದಾವಾ ಆಸ್ತಿಗಳಲ್ಲಿ ಭೂಪರಿವರ್ತನಾ ಆಗಿರುವುದು ನನಗೆ ಗೊತ್ತಿಲ್ಲ.

5. ಬೆಂಗಳೂರಿನಲ್ಲಿ ವತ್ಸಲಾ ಇವರ ಹೆಸರಿನಲ್ಲಿರುವ ಮನೆ ಎಲ್ಲಿದೆಯೋ ಎಂಬುದು ನನಗೆ ಗೊತ್ತಿಲ್ಲ. ಸದರಿಯವರು ಆ ಮನೆಯನ್ನು ಯಾವಾಗ ಖರೀದಿ ಮಾಡಿದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಯಾವತ್ತಾದರೂ ವಾದಿ ಅಥವಾ ಪ್ರತಿವಾದಿ 2 ಆಗಲಿ ಯಾವತ್ತಾದರೂ ವಾಸವಿದ್ದರೋ ಎಂಬುದು ನನಗೆ ಗೊತ್ತಿಲ್ಲ. ಸದರಿ ಮನೆಯ ಕರವನ್ನು ಯಾರು ತುಂಬುತ್ತಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಒಂದನೇ ಪ್ರತಿವಾದಿ ಬಾಡಿಗೆ ನಾತೆಯಿಂದ ಬಂದ ಹಣದಿಂದ ತುಂಬುತ್ತಾರೆ ಎಂದು ಹೇಳುತ್ತಾರೆ. ನನಗೆ ಗೊತ್ತಿರುವ ಪ್ರಕಾರ ತುಂಬಾ ವರ್ಷಗಳ ಹಿಂದೆ 15 ರಿಂದ 20 ಸಾವಿರ ರೂಪಾಯಿಗಳು ಬಾಡಿಗೆ ಬರುತ್ತಿತ್ತು. ಈ ಕುರಿತು ದಾಖಲೆಯನ್ನು ಹಾಜರು ಪಡಿಸಿಲ್ಲ. ನಾವುಗಳು ಯಾವುದೇ ರೀತಿ ಮನೆ ಕರವನ್ನು ತುಂಬಿಲ್ಲ, ಆದ್ದರಿಂದ ಯಾವುದೇ ದಾಖಲೆ ಇರುವುದಿಲ್ಲ. ಒಂದನೇ ಪ್ರತಿವಾದಿಯು ಸಹ ಯಾವತ್ತೂ ಸಹ ಬಾಡಿಗೆ ಹಣವನ್ನು ಪಡೆದಿಲ್ಲ ಮತ್ತು ಮನೆ ಕರವನ್ನು ತುಂಬಿರಲಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರುತ್ತಾರೆ. ಕಾಲಾವಕಾಶ ನೀಡಿ ಸಾಕ್ಷಿಯ ಪಾಟಿ ಸವಾಲನ್ನು ಮುಂದೂಡಲಾಯಿತು.)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**